ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಾಮಿಷ್ ಆವ್ದು. [ನಂ. 40.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ॥ 15, ಸ್ 1903.

IIನೆ ಭಾಗ.

ಇಂಡ್ಯೆಗವರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್ಲೀರು ವಗ್ಸೆರೇರಿಂದ ಕೂಡೋಣಾದ ಇಸ್ತಿಹಾರ್ನಾಮೆಗಳು.

ಮೈಸೂರ ರೆವಿನ್ಯೂ ಸರ್ವೆ ಮತ್ತು ಸೆಟ್ಲ್ಮೆಂಟ್ ಇಲಾಖಾ.

ಇಸ್ತಿಹಾರ್ನಾಮೆ.

ತಾರೀಖು 10ನೆ ಅಕ್ಟೋಬರ್ 1903.

ನಂಬರು 360, ಸಮಸ್ತ ಜನಗಳಿಗೂ ತಿಳಿಯುವದಕ್ಕೋಸ್ಕರ ಈ ಮೂಲಕ ಪ್ರಾಮಿಷ್ ಮಾಡುವದೇನಂದರೆ, 1903ನೆ ಇಸವಿ ನೊವೆಂಬರ್ ಗುರ್ವಾ ತಾರೀಖಿನಲ್ಲಿ ಅಥವಾ ಆ ತರುವಾಯ ಕ್ಷಿಪ್ರದಲ್ಲಿ ಬೆಂಗಳೂರ ಡಿಸ್ಟ್ರಿಕ್ಟಿಗೆ ಕೀರದ ಬೆಂಗಳೂರ ತಾಲ್ಲೂಕಿನಲ್ಲಿ ರೀ-ಸರ್ವೆ ಕಲಸಗಳು ಪ್ರಾರಂಭಿಸಲ್ಪಡುವವೆ.

ಜೆ. ಪಿ. ಗ್ಯಾಂಟ್,
ಸರ್ವೆ ಮತ್ತು ಸೆಟ್ಲ್ಮೆಂಟ್ ಕಮಿಷನರ್, ಮೈಸೂರ್.

ಫಾರೆಸ್ಟ್ಸ್ ಇಲಾಖಾ.

ನೋಟಿಫಿಕೇಷ್ನ್, ತಾರೀಖು 12ನೆ ಅಕ್ಟೋಬರ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—1903–1904ನೆ ಇಸವಿಗೆ ಬೆಂಗಳೂರು ಡಿಸ್ಟ್ರಿಕ್ಟಿನ ಎಲ್ಲಾ ಸ್ಟೇಟ್ ಫಾರೆಸ್ಟ್ಸುಗಳ ಪಸಾರೆ ಜೆನಸಿಯ ಹಕ್ಕುದಾರಿಯನ್ನು ರೇಂಜ್ ಫಾರೆಸ್ಟ್ ಆಫಿಸರುಗಳು ಈ ಕೆಳಗೆ ಕಾಣಿಸಿ ಇರುವ ಸ್ಥಳಗಳಲ್ಲಿಯು ಆಯಾಯ ತಾರೀಕುಗಳಲ್ಲಿ ಬಹಿರಂಗವಾಗಿ ಹರಾಜು ಮಾಡುತ್ತಾರೆ.

ಈ ಹರಾಜು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ಮಂಜೂರಾತಿಗೆ ಬಳಪಟ್ಟು ಇರುತ್ತೆ. ಹರಾಜು ಆಯಾಯ ತಾರೀಕಿನ ಮಧ್ಯಾನ್ಹ 12 ಘಂಟೆಗೆ ಸುರು ಮಾಡಲ್ಪಡುವದು.

ನಂಬರ್.	ರೇಂಜ್.	ಸ್ಟೇಟ್ ಫಾರೆಸ್ಟ್ಸುಗಳ ಹೆಸರು.	ಹರಾಜು ಮಾಡತಕ್ಕ ಸ್ಥಳ.	ಹರಾಜು ತಾರೀಖು.
1	ಬೆಂಗಳೂರು ...	ಉಜನಿ, ಹುಲ್ಕುಡಿ, ಮಾಕಳಿ, ದೇವರಬೆಟ್ಟ, ನಾಯಕನಹಳ್ಳಿ.	ದೊಡ್ಡಬಳ್ಳಾಪುರ.	31ನೆ ಅಕ್ಟೋಬರ್ 1903.
		ರಾಗಿಹಳ್ಳಿ ಫಾರೆಸ್ಟ್ ...	ಬನ್ನೇರಘಟ್ಟ.	3ನೆ ನವಂಬರ್ 1903.
		ಬಳನಕುಪ್ಪೆ ...		
		ತಮ್ಮನಾಯಕನಹಳ್ಳಿ ...		